ದಿಃ **22-01-2026** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ.**KNR** ವಕೀಲರವರಿಂದಃ

**03.** ನಾನು **4** ನೇ ತರಗತಿಯವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಬಾಷೆ ಓದಲು ಬರೆಯಲು ಬರುತ್ತದೆ ಇಂಗ್ಲಿಷ ಬಾಷೆ ಓದಲು ಬರುವುದಿಲ್ಲ. ದಾವಾ ಆಸ್ತೀಯು ಬಸಪ್ಪರವರ ಪಿತ್ರಾರ್ಜಿತ ಆಸ್ತೀ ಆಗಿರುತ್ತದೆ. ದಾವಾ ಆಸ್ತೀಯು **1, 3** ಮತ್ತು **7** ನೇ ಪ್ರತಿವಾದಿಯರ ಜಂಟಿ ಕುಟುಂಬದ ಆಸ್ತೀ ಎಂದರೆ ನಾವು ಖರೀದಿ ಮಾಡುವಾಗ ಜಂಟಿ ಕುಟುಂಬದ ಆಸ್ತೀ ಆಗಿರಲಿಲ್ಲ. ಸಿದ್ಧಬಸಯ್ಯ ಮತ್ತು ಪ್ರತಿವಾದಿಯರೊಂದಿಗೆ ಸುಮಾರು **25** ವರ್ಷಗಳ ವಿಶ್ವಾಸ ಇತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ವಿಶ್ವಾಸದಿಂದ ಸಿದ್ಧಬಸಯ್ಯ ಮತ್ತು ಪ್ರತಿವಾದಿಯರು ಸಣ್ಣಪುಟ್ಟ ಲೇವಾದೇವಿ ವ್ಯವಹಾರವನ್ನು ಮಾಡಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿಯರಿಗೆ ದಿ.**16-02-2015** ರಂದು ಸಿದ್ಧಬಸಯ್ಯನವರು ನಾಮಕವಾಸ್ಥ ಖರೀದಿ ಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎಂದರೆ ನಮ್ಮಾರಿನಲ್ಲಿ ಹಿರಿಯರು ದಾವಾ ಆಸ್ತೀಯ ಪಹಣಿ, ಹಕ್ಕುಬದಲಾವಣೆಯನ್ನು ಪರೀಕ್ಷೆ ಮಾಡಿ ಉಪನೊಂದಣಿ ಕಛೇರಿಯಲ್ಲಿ ವಿಚಾರಣೆ ಮಾಡು ಎಂದು ತಿಳಿಸಿದ್ದಕ್ಕೆ ನಾನು ದಾವಾ ಆಸ್ತೀಯ ಪಹಣಿ, ಹಕ್ಕುಬದಲಾವಣೆಯನ್ನು ಪರೀಕ್ಷೆ ಮಾಡಿ ಉಪನೊಂದಣಿ ಕಛೇರಿಯಲ್ಲಿ ವಿಚಾರಣೆ ಮಾಡಿ ಎಲ್ಲಾ ಸರಿ ಇರುವುದನ್ನು ವಿಚಾರಿಸಿ ದಾವಾ ಆಸ್ತೀಯನ್ನು ಖರೀದಿ ಮಾಡಿರುತ್ತೇನೆ. ನಮ್ಮ ಊರಿನ ಹಿರಿಯರು ಎಂದರೆ ಶಿವಪ್ಪಮುದಿಯಪ್ಪನವರ. ಶಿವಪ್ಪಮುದಿಯಪ್ಪನವರಿಗೆ ಅಪಾರವಾದ ಕಾನೂನಿನ ಜ್ಞಾನ ಇತ್ತು ಮತ್ತು ಶಿದ್ಧಬಸಯ್ಯರು ದಾವಾ ಆಸ್ತೀಯನ್ನು ಖರೀದಿಸಿದ್ದಾಗ ಶಿವಪ್ಪಮುದಿಯಪ್ಪನವರು ಇದ್ದರು.

**04.** ನಾನು ಖರೀದಿ ಮಾಡಿದ ಖರೀದಿ ಪತ್ರದಲ್ಲಿ ಶಿವಪ್ಪಮುದಿಯಪ್ಪನವರ ರವರ ಸಹಿಯನ್ನು ಹಾಕಿಸಿರುತ್ತೇನೆ. ನನ್ನ ಖರೀದಿ ಪತ್ರದಲ್ಲಿ ಶಿವಪ್ಪಮುದಿಯಪ್ಪನವರ ಎಂದು ಎಲ್ಲಿಯೂ ಸಾಕ್ಷಿಯ ಸಹಿ ಇರುವುದಿಲ್ಲ ಎಂದರೆ ಸಾಕ್ಷಿಯು ಸುಮ್ಮನೆ ಇರುತ್ತಾರೆ. ಖರೀದಿ ಪತ್ರದಲ್ಲಿ ಶಿವಪ್ಪ ಎಂದು ಸಹಿ ಇರುತ್ತದೆ ಎಂದು ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸಹಿ ಇರುತ್ತದೆ. **3** ನೇ ಪ್ರತಿವಾದಿ ಕ್ರಯ ಪತ್ರ ರದ್ದು ಪಡಿಸಲು ಸಿದ್ದಬಸಯ್ಯರವರ ಮೇಲೆ ಇದೇ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. **OS.No.116/2016** ಎಂದು ಇದೇ ನ್ಯಾಯಾಲಯದಲ್ಲಿ ಸದರಿ ಪ್ರಕರಣವು ಚಾಲ್ತಿಯಲ್ಲಿ ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ದಾವೆಯಲ್ಲಿ ನಾನು ಸಹ ಸಿದ್ದಬಸಯ್ಯನವರ ಜೊತೆಗೆ ಪ್ರತಿವಾದಿಯಾಗಿ ಇರುತ್ತೇನೆ ಎಂದರೆ ಸರಿ. ಸದರಿ **OS.No.116/2016** ರಲ್ಲಿ ನಾನು ತಕರಾರನ್ನು ಸಲ್ಲಿಸಿರುತ್ತೇನೆ. **1** ರಿಂದ **3** ನೇ ಪ್ರತಿವಾದಿ ಮತ್ತು ಅವರ ತಂದೆಯೊಂದಿಗಿನ **OS.No.79/2016** ಆಸ್ತೀ ವಿಭಾಗಕ್ಕಾಗಿ ಪ್ರಕರಣ ಇದೇ ನ್ಯಾಯಾಲಯದಲ್ಲಿ ಚಾಲ್ತಿ ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ದಿ.**16-02-2015** ರಂದು **1** ರಿಂದ ಮತ್ತು **04** ನೇ ಪ್ರತಿವಾದಿಯರು ಸಿದ್ದಬಸಯ್ಯರವರಿಗೆ ಹಣದ ಭದ್ರತೆಗಾಗಿ ಖರೀದಿ ಕೊಟ್ಟಿದ್ದರು ವಿನಹ ಸಂಪೂರ್ಣವಾಗಿ ಖರೀದಿ ಪತ್ರ ಮಾಡಿಕೊಟ್ಟಿರುವುದಿಲ್ಲ ಎಂದರೆ ನಾನು ದಾವಾ ಆಸ್ತೀಯ ಸ್ಕೆಚ್ಚನ್ನು ತೆಗೆಯಿಸಿ ನೋಡಿ ಉಪನೊಂದಣಿ ಕಛೇರಿಯಲ್ಲಿ ದಾವಾ ಆಸ್ತೀಯನ್ನು ಖರೀದಿ ಮಾಡಬಹುದು ಎಂದು ಹೇಳಿದ ನಂತರ ನಾನು ಖರೀದಿ ಮಾಡಿರುತ್ತೇನೆ. **1** ರಿಂದ **3** ಮತ್ತು **04** ನೇ ಪ್ರತಿವಾದಿಯರು ಹಣದ ಭದ್ರತೆಗಾಗಿ ನಾಮಕವಾಸ್ಥೆ ಖರೀದಿ ಪತ್ರವನ್ನು ಮಾಡಿಕೊಟ್ಟಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**05.** ಸಿದ್ಧಬಸಯ್ಯ ಮತ್ತು ನನಗೂ ಎಷ್ಟು ವರ್ಷಗಳಿಂದ ವಿಶ್ವಾಸ ಇರುತ್ತದೆ ಎಂದರೆ ಅವರು ಚೆಳ್ಳಗೇರಿ ಊರಿನವರು ನಾನು ಹೊಳಲಿನವನು ಆಗಿದ್ದು ಅವರು ನಾನು ಖರೀದಿಸುವ **6** ತಿಂಗಳು ಹಿಂದಿನಿಂದ ನಮ್ಮ ಮನೆಗೆ ಬಂದು ಓಡಾಡಿ ಖರೀದಿ ಮಾಡು ಎಂದು ಹೇಳಿರುತ್ತಾರೆ. ಈ ವಿಷಯವನ್ನು ನಾನು ನನ್ನ ವಾದ ಪತ್ರದಲ್ಲಿ ಅಥವಾ ಮುಖ್ಯವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿರುವುದಿಲ್ಲ. ಸದರಿ ವಿಷಯವನ್ನು ಬರೆಸಲು ತೊಂದರೆ ಇತ್ತಾ ಎಂದರೆ ಇಂತಹ ವಿಷಯವನ್ನು ಯಾರು ಬರೇಸುತ್ತಾರೆ.

<u>ಈ ಹಂತದಲ್ಲಿ ಪಾಟೀ ಸವಾಲನ್ನು ಮುಂದುಡಲಾಯಿತು.</u>

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ

"ನನ್ನ ಸಮಕ್ಷಮ"

**Sd/-**
(ಶ್ರೀಮತಿ ಅಕ್ಷತಾ ಟಿ.)
ದಿವಾಣಿ ನ್ಯಾಯಾಧೀಶರು,
ಹಡಗಲಿ.

ದಿಃ **16-09-2022** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರವರಿಂದಃ

ಪ್ರತಿವಾದಿ ಪರ ವಕೀಲರು ಪಾಟಿ ಸವಾಲಿಗೆ ಸಮಯವಾಕಾಶ ಕೇಳಿರುತ್ತಾರೆ. ಯಾವುದೇ ಸಕಾರಣ ನೀಡದ ಕಾರಣ ಪಾಟಿ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

"ನನ್ನ ಸಮಕ್ಷಮ"

ಓ. ಹೇ. ಕೇ. ಸರಿ ಇದೆ

(ಶ್ರೀ.ವೀರೇಶ್ ಕುಮಾರ್.ಸಿ.ಕೆ.)
ದಿವಾಣಿ ನ್ಯಾಯಾಧೀಶರು,
ಹಡಗಲಿ.